Kristu Jayanti College
AUTONOMOUS Bengaluru
Accredited 'A' Grade by NAAC | Affiliated to Bangalore University

DEPARTMENT OF HUMANITIES (KANNADA)

Kananda Habba 2017

ಕನ್ನಡ ಹಬ್ಬದ ವರದಿ-೨೦೧೭

ಸ್ಥಳ: ಮುಖ್ಯ ಸಭಾಂಗಣ, ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು

ದಿನಾಂಕ: ೨೯-೧೧-೨೦೧೭ ಬುಧವಾರ ಸಮಯ: ಮಧ್ಯಾಹ್ನ ೧.೪೫ ರಿಂದ ೫.೦೦ ಗಂಟೆ

ovjective : ಕ್ರಿಸ್ತು ಜಯಂತಿ ಕಾಲೇಜು, ಕನ್ನಡ ವಿಭಾಗದಲ್ಲಿ ದಿನಾಂಕ ೨೯ ನವೆಂಬರ್, ೨೦೧೭ ರಂದು ಕನ್ನಡ ಹಬ್ಬ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಯುತ ಕಲಾಶ್ರಿ ಎಂ. ಆರ್. ಸತ್ಯನಾರಾಯಣ ಹೆಸರಾಂತ ಗಮಕಿಗಳು, ಬೆಂಗಳೂರು. ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ರೆ. ಫಾ. ಜೋಸ್‌ಕುಟ್ಟಿ ಪಿ.ಡಿ. ರವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ವಿಭಾಗದ ಮುಖ್ಯಸ್ಥರಾದ ಶ್ರೀಯುತ ಸರ್ವೇಶ್ ಬಿ.ಎಸ್. ಅವರು ಮತ್ತು ವಿದ್ಯಾರ್ಥಿ ಮುಖಂಡರಾದ ಚಿ|| ಬಸವರಾಜು ಮತ್ತು ಕು|| ರಾಧ ಉಪಸ್ಥಿತರಿದ್ದರು.

ಕಾರ್ಯಕ್ರಮ ವಿದ್ಯಾರ್ಥಿಗಳ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಈ ಕನ್ನಡ ಹಬ್ಬಕ್ಕೆ ಎಲ್ಲರನ್ನೂ ಸ್ವಾಗತಿಸಿದವರು ವಿಭಾಗದ ಮುಖ್ಯಸ್ಥರಾದ ಶ್ರೀಯುತ ಸರ್ವೇಶ್ ಬಿ.ಎಸ್. ರವರು. ಪ್ರಾಸ್ತಾವಿಕ ಭಾಷಣ ಮಾಡಿದ ರೆ,ಫಾ. ಜೋಸ್ ಕುಟ್ಟಿ ಕನ್ನಡ ಭಾಷೆಗೆ ಕೊಡುಗೆ ನೀಡಿದ ಕುವೆಂಪು ಬೇಂದ್ರೆ ಮತ್ತು ಕಾರಂತ ಮುಂತಾದ ಮಹನೀಯರನ್ನು ನೆನೆದರು. ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳಾದ ಬೇಲೂರು, ಹಳೇಬೀಡು ಮೈಸೂರು ಶ್ರವಣಬೆಳಗೊಳ ಮುಂತಾದ ಸಾಂಸ್ಕೃತಿಕ ನೆಲೆಗಳನ್ನು ಸ್ಮರಿಸಿದರು. ಹಾಗೆಯೇ ವಿದ್ಯಾರ್ಥಿಗಳ ಶಿಸ್ತನ್ನು ಶ್ಲಾಘಿಸಿ ಎಲ್ಲರಿಗೂ ಕನ್ನಡ ಹಬ್ಬದ ಶುಭಾಶಯಗಳನ್ನು ಕೋರಿದರು. ನಂತರ ವಿದ್ಯಾರ್ಥಿಗಳು ಜವಾಬ್ದಾರಿಯಿಂದ ವರ್ತಿಸಿ ತಮ್ಮ ಗುರಿಗಳನ್ನು ಸಾಧಿಸಬೇಕೆಂದು ಕರೆ ಕೊಟ್ಟರು.

**Activity detail:** ನಂತರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಲಾಶ್ರೀ ಎಂ ಆರ್ ಸತ್ಯನಾರಾಯಣ ಅವರು ತಮ್ಮ ಭಾಷಣದಲ್ಲಿ ಗಮಕ ಕಲೆಯನ್ನು ಪರಿಚಯಿಸುವುದರೊಂದಗೆ ನೋಡುವ ಮತ್ತು ಕೇಳುವ ಮಾಧ್ಯಮದ ವಿಶಿಷ್ಠತೆಯನ್ನು ಕುರಿತು ಮಾತನಾಡಿ, ಆ ಮೂಲಕ ಗಮಕ ಶೈಲಿಯಲ್ಲಿ ಹಳೆಗನ್ನಡ ಪದ್ಯವನ್ನು ಹಾಡಿದರು ಹಾಗೂ ದಾಸರ ಪದ್ಯವೊಂದನ್ನು ಹಾಡಿಸಿ ವಿದ್ಯಾರ್ಥಿಗಳನ್ನು ರಂಜಿಸಿದರು. ಹಳಗನ್ನಡ ಸಾಹಿತ್ಯ ಪರಂಪರೆಯನ್ನು ಪರಿಚಯಿಸಿ ಪಂಪ, ರನ್ನ, ಕುಮಾರವ್ಯಾಸ ಮುಂತಾದ ಕವಿಗಳು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವ ಅದ್ವಿತೀಯ ಕೊಡುಗೆಯನ್ನು ವಿದಾರ್ಥಿಗಳಿಗೆ ಅವಲೋಕನ ಮಾಡಿಸಿದರು. ಕುವೆಂಪುರವರ “ಶ್ರೀರಾಮಾಯಣದರ್ಶನಂ” ಕೃತಿಯ ಪ್ರಾಮುಖ್ಯತೆಯನ್ನು ಪರಿಚಯಮಾಡಿ ಕೆಲವು ತುಣುಕುಗಳನ್ನು ನೆನೆದರು.

ನಂತರ ವಿಭಾಗದಲ್ಲಿ ನಡೆಸಿದ ಭಾಷಣ ಸ್ಪರ್ಧೆ, ನಾಟಕ, ಸೃಜನಾತ್ಮಕ ಬರಹ, ಗಾಯನ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಪ್ರಾಧ್ಯಾಪಕರಾದ ಶ್ರೀಯುತ ವೆಂಕಟೇಶಪ್ಪ ಪಿ. ಅವರು ನಡೆಸಿಕೊಟ್ಟರು.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ವಿವರ

| ಕ್ರಮ ಸಂಖ್ಯೆ | ದಿನಾ0ಕ | ಸ್ಪರ್ಧಾ ವಿಷಯ | ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| ೧. | ೨೩/೧೧/೨೦೧೮ | ಸೃಜನಾತ್ಮಕ ಬರಹ | ೮೫ |
| ೨. | ೨೪/೧೧/೨೦೧೮ | ಚರ್ಚಾ ಸ್ಪರ್ಧೆ | ೨೧ |
| ೩. | ೨೫/೧೧/೨೦೧೮ | ಗಾಯನ ಸ್ಪರ್ಧೆ | ೪೦ |
| ೪. | ೨೬/೧೧/೨೦೧೮ | ಕಿರು ನಾಟಕ | ೨೧ |
| ೫. | ೨೮/೧೧/೨೦೧೮ | ನೃತ್ಯ ಸ್ಪರ್ಧೆ | ೨೪ |
| ೬. | ೨೯/೧೧/೨೦೧೮ | ರಸ ಪ್ರಶ್ನೆ | ೪೨ |

ಅಂತಿಮವಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಪ್ರಾಧ್ಯಾಪಕರಾದ ಶ್ರೀಯುತ ಚಂದ್ರಶೇಖರ್ ಅವರು ನಡೆಸಿಕೊಟ್ಟರು. ಇದರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ೫.೦೦ ಗಂಟೆಗೆ ಕಾರ್ಯಕ್ರಮ ಯಶಸ್ವಿಯಾಗಿ ಮುಗಿಯಿತು.

ವರದಿ ಸಿದ್ಧಪಡಿಸಿದವರು

ಪ್ರೊ . ವೆಂಕಟೇಶಪ್ಪ ಪಿ



ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ




ಮುಖ್ಯ ಅತಿಥಿಗಳ ಭಾಷಣ



ಕಂಸಾಳೆ ನೃತ್ಯ ಮಾಡುತ್ತಿರುವ ವಿದ್ಯಾರ್ಥಿಗಳು